Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:4(3), April 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

# 'ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ವಿಶ್ವನಾಥ ಸತ್ಯನಾರಾಯಣ ಅವರ ಕಥೆಗಳಲ್ಲಿ ಸಾಮಾಜಿಕ ಧೋರಣೆಗಳ ತೌಲನಿಕ ಸಮೀಕ್ಷೆ'

**ತಿಪ್ಪೇಸ್ವಾಮಿ. ಟಿ,**
ಸಂಶೋಧನಾ ವಿದ್ಯಾರ್ಥಿ,
ತೌಲನಿಕ ದ್ರಾವಿಡ ಸಾಹಿತ್ಯ
ಮತ್ತು ತತ್ವಶಾಸ್ತ್ರ ವಿಭಾಗ,
ದ್ರಾವಿಡ ವಿಶ್ವವಿದ್ಯಾಲಯ
ಕುಪ್ಪಂ.–517426

**ಪ್ರೊ: ಎನ್. ಸುಶೀಲ,**
ಮಾರ್ಗದರ್ಶಕರು
ತೌಲನಿಕ ದ್ರಾವಿಡ ಸಾಹಿತ್ಯ
ಮತ್ತು ತತ್ವಶಾಸ್ತ್ರ ವಿಭಾಗ,
ದ್ರಾವಿಡ ವಿಶ್ವವಿದ್ಯಾಲಯ
ಕುಪ್ಪಂ.–517426

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ವಿಶ್ವನಾಥ ಸತ್ಯನಾರಾಯಣ ಅವರ ಸಣ್ಣ ಕಥೆಗಳಲ್ಲಿ ಸಾಮಾಜಿಕ ಧೋರಣೆಗಳ ತೌಲನಿಕ ಅಧ್ಯಯನ ಎನ್ನುವ ನನ್ನ ಅಧ್ಯಯನದಲ್ಲಿ ಇಬ್ಬರು ಲೇಖಕರ ಕೆಲವೊಂದು ಕಥೆಗಳನ್ನು ತೆಗೆದುಕೊಂಡು ಈ ಕಥೆಗಳಲ್ಲಿ ಬರುವಂತಹ ಸಾಮಾಜಿಕ ಧೋರಣೆಗಳನ್ನು ಮತ್ತು ಸಾಮ್ಯ–ವೈಷಮ್ಯ ಅಂಶಗಳನ್ನು ಈ ಪ್ರಬಂಧದಲ್ಲಿ ಗುರುತಿಸಲಾಗಿದೆ. ಕಥೆಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

## ಚಂದ್ರವದನಾ – ಕಪರ್ಧಿ : ಕಥೆಗಳ ವಿಸ್ತೃತ ಸಾರಾಂಶ

ಚಂದ್ರವದನಾ–ಕಪರ್ಧಿ ಎಂಬ ಎರಡು ಕಥೆಗಳು ಸಮಾಜದ ಅಂಚಿನಲ್ಲಿರುವ ವ್ಯಕ್ತಿಗಳ ಬದುಕು, ಹಣದ ಆಸೆ, ವೇಶ್ಯಾವೃತ್ತಿ, ನಾಟಕ ರಂಗ, ತಾಯಿತನ ಮತ್ತು ಮಾನವೀಯ ಮೌಲ್ಯಗಳನ್ನು ಆಳವಾಗಿ ಚಿತ್ರಿಸುತ್ತವೆ. ಇವು 70–80ರ ದಶಕದ ಸಾಮಾಜಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುವ ಕಥೆಗಳಾಗಿವೆ.

### ಚಂದ್ರವದನಾ ಕಥೆಯ ಸಾರಾಂಶ

ಲೇಖಕನಿಗೆ ಮೊದಲಿನ ದಿನಗಳಲ್ಲಿ ನಾಟಕಗಳನ್ನು ನೋಡುವ ಆಸಕ್ತಿ ಕಡಿಮೆಯಾಗಿತ್ತು. ನಟರು ಚೆನ್ನಾಗಿ ಅಭಿನಯಿಸುತ್ತಿಲ್ಲ ಎಂಬ ಅಭಿಪ್ರಾಯ ಅವನಲ್ಲಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳೆಯರು ನಾಟಕಗಳಲ್ಲಿ ಅಭಿನಯಿಸಲು ಆರಂಭಿಸಿದಾಗ ಅವನ ಆಸಕ್ತಿ ಮತ್ತೆ ಹೆಚ್ಚುತ್ತದೆ. ಆ ಕಾಲದಲ್ಲಿ ಮಹಿಳೆಯರು

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:4(3), April 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ನಾಟಕಗಳಲ್ಲಿ ಅಭಿನಯಿಸುವುದು ಅಪರೂಪವಾಗಿತ್ತು. ಆದ್ದರಿಂದ ಮಹಿಳಾ ನಟಿಯರನ್ನು ನೋಡಲು ಜನರು ಹೆಚ್ಚಿನ ಸಂಖ್ಯೆಯಲ್ಲಿ ನಾಟಕಗಳಿಗೆ ಬರುತ್ತಿದ್ದರು.

ಈ ಸಂದರ್ಭದಲ್ಲಿ ಚಂದ್ರವದನಾ ಮತ್ತು ಅವಳ ಅಕ್ಕ ಮಯಿಲೂರಿನಲ್ಲಿ ಮೊದಲ ಬಾರಿಗೆ ನಾಟಕ ಪ್ರದರ್ಶನ ಆರಂಭಿಸುತ್ತಾರೆ. ಚಂದ್ರವದನಾ ಮೂಲತಃ ವೇಶ್ಯಾವೃತ್ತಿಯಲ್ಲಿ ತೊಡಗಿದ್ದ ಹುಡುಗಿ. ಅವಳ ಮಾವ ಸುರಪ್ಪ ಹಣದ ಆಸೆಯಿಂದ ವೇಶ್ಯಾವೃತ್ತಿಯಿಂದ ಹೆಚ್ಚಿನ ಆದಾಯ ಸಾಧ್ಯವಿಲ್ಲ ಎಂದು ಅರಿತು, ಚಂದ್ರವದನೆಯನ್ನು ನಾಟಕ ರಂಗಕ್ಕೆ ತರುತ್ತಾನೆ. ಇದರ ಪರಿಣಾಮವಾಗಿ ಆ ನಾಟಕ ಕಂಪನಿಗೆ ಬಹಳ ಪ್ರಸಿದ್ಧಿ ದೊರೆಯುತ್ತದೆ. ನಂತರ ಬೆಂಗಳೂರುಗೂ ಬಂದು ಕಂಪನಿ ಇನ್ನಷ್ಟು ಹೆಸರು ಮಾಡುತ್ತದೆ.

ಲೇಖಕರು ಕಾಲೇಜಿನಲ್ಲಿ ಓದುತ್ತಿದ್ದಾಗ ಪ್ರತಿದಿನ ನಾಟಕ ನೋಡಲು ಹೋಗುತ್ತಿದ್ದನು. ಅವನ ಸ್ನೇಹಿತರೂ ಜೊತೆಯಾಗುತ್ತಿದ್ದರು. ಆ ವರ್ಷ ಕಾಲೇಜಿನ ಪಠ್ಯದಲ್ಲಿ 'ರೋಮಿಯೋ ಜೂಲಿಯೆಟ್' ನಾಟಕ ಇತ್ತು. ಆದರೆ ಲೇಖಕನಿಗೆ ಎಲ್ಲ ಜೂಲಿಯೆಟ್ ಪಾತ್ರಧಾರಿಣಿಗಳಿಗಿಂತ ಚಂದ್ರವದನೆಯೇ ಹೆಚ್ಚು ಮೆಚ್ಚುಗೆಯಾಗುತ್ತಾಳೆ.

ಚಂದ್ರವದನೆಯನ್ನು ಲೇಖಕ ಮೊದಲಿನಿಂದಲೂ ಪರಿಚಯ ಹೊಂದಿದ್ದ. ಅವರ ಮಾವನ ಕುಟುಂಬದವರೊಂದಿಗೆ ಪರಿಚಯ ಇದ್ದುದರಿಂದ ಅವನು ಆಗಾಗ ಅವರ ಮನೆಗೆ ಹೋಗುತ್ತಿದ್ದ. ಇದರಿಂದ ಚಂದ್ರವದನಿಗೂ ಲೇಖಕನ ಗುರುತು ಇತ್ತು. ಒಂದು ದಿನ ಚಂದ್ರವದನಾ ಅವರ ಮಾವನ ಮನೆಗೆ ಬಂದು ಏನೋ ಮಾತುಕತೆ ನಡೆಸುತ್ತಾಳೆ. ನಂತರ ಅವಳು ಗರ್ಭಿಣಿಯಾಗಿದ್ದಾಳೆ ಎಂಬ ವಿಷಯ ಬೆಳಕಿಗೆ ಬರುತ್ತದೆ.

ನಾಟಕ ನಡೆಯಬೇಕಾದ ಮಧ್ಯದಲ್ಲೇ ಚಂದ್ರವದನಾ ಕಾಣೆಯಾಗಿದ್ದಾಳೆ ಎಂಬ ಸುದ್ದಿ ಜನರಿಗೆ ತಿಳಿಯುತ್ತದೆ. ಕೆಲವರು ಅವಳನ್ನು ವೇಶ್ಯೆ ಎಂದು ನಿಂದಿಸುತ್ತಾರೆ. ಆದರೆ ವಾಸ್ತವದಲ್ಲಿ ಅವಳು ತನ್ನ ಮಾವನೊಂದಿಗೆ ಹೋಗಿರುತ್ತಾಳೆ. ಅವಳು ಗರ್ಭಿಣಿಯಾಗಿರುವುದನ್ನು ಮಾವನು ಇಷ್ಟಪಡುವುದಿಲ್ಲ. ಮಗು ಹುಟ್ಟಿದರೆ ತನ್ನ ಆದಾಯ ಕಡಿಮೆಯಾಗುತ್ತದೆ ಎಂದು ಆತ ಭಾವಿಸುತ್ತಾನೆ. ಚಂದ್ರವದನಾಳ ಅಕ್ಕ ಮತ್ತು ತಾಯಿ ಮಕ್ಕಳನ್ನು ಪಡೆದ ನಂತರ ದುರ್ಬಲರಾಗಿರುವುದನ್ನು ನೆಪವಾಗಿ, ಗರ್ಭಪಾತ ಮಾಡಿಸಿಕೊಳ್ಳಲು ಒತ್ತಡ ಹಾಕುತ್ತಾನೆ. ಆದರೆ ಚಂದ್ರವದನಾ ಇದಕ್ಕೆ ಒಪ್ಪುವುದಿಲ್ಲ. ತಾಯಿಯ ಹೃದಯದ ಕಾರಣದಿಂದ ಮಗುವನ್ನು ಉಳಿಸಿಕೊಳ್ಳಲು ನಿರ್ಧರಿಸುತ್ತಾಳೆ. ಅವಳು ಮಾವನೊಂದಿಗೆ ಬೇರೆಡೆಗೆ ಹೋಗಿ, ಎರಡು ತಿಂಗಳ ನಂತರ ಮಗುವಿನೊಂದಿಗೆ ಹಿಂದಿರುಗುತ್ತಾಳೆ.

ಮಗುವಿನೊಂದಿಗೆ ಮರಳಿದ ಚಂದ್ರವದನಾ ಮತ್ತೆ ನಾಟಕಗಳಲ್ಲಿ ಅಭಿನಯ ಆರಂಭಿಸುತ್ತಾಳೆ. ಅವಳನ್ನು ಕೆಲವರು ಇನ್ನೂ ವೇಶ್ಯೆ ಎಂದು ಕರೆದರೂ, ಅವಳು ತಾಯಿಯೆಂಬ ಗೌರವವನ್ನು ಪಡೆದುಕೊಳ್ಳುತ್ತಾಳೆ. ನಂತರ ಶಕುಂತಲೆ ಪಾತ್ರವನ್ನು ಅವಳು ಅಭಿನಯಿಸುತ್ತಾಳೆ ಮತ್ತು ಮಗ ಭರತನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾನೆ. ಈಗ ಅವಳಿಗೆ ಹಣದ ಕೊರತೆಯೂ ಇರುವುದಿಲ್ಲ.

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:4(3), April 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ಲೇಖಕ ಕಥೆಯನ್ನು "ಚಂದ್ರವದನಾ ಈಗ ಎಲ್ಲಿದ್ದಾಳೆ?" ಎಂಬ ಪ್ರಶ್ನೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ. ವೇಶ್ಯೆಯೆಂದು ಸಮಾಜ ತಿರಸ್ಕರಿಸಿದ ಮಹಿಳೆಯಲ್ಲಿಯೂ ತಾಯಿತನ ಮತ್ತು ಮಾನವೀಯತೆ ಇರುವುದನ್ನು ಈ ಕಥೆ ಬಲವಾಗಿ ಹೇಳುತ್ತದೆ.

## ಕಪರ್ಧಿ ಕಥೆಯ ಸಾರಾಂಶ

ಕಪರ್ಧಿ ಎಂಬವನು ಲೇಖಕನ ಗೆಳೆಯ. ಅವನು ಉದ್ಯೋಗದಲ್ಲಿ ನ್ಯಾಯಾಧೀಶನಾಗಿದ್ದ. ಲೇಖಕನಿಗೆ ಅವನು ಕಳೆದ ಎರಡು ವರ್ಷಗಳಿಂದ ಪರಿಚಿತನಾಗಿದ್ದ. ಒಂದು ದಿನ ಕಪರ್ಧಿ ಲೇಖಕನನ್ನು ತನ್ನ ಮನೆಗೆ ಕರೆಯುತ್ತಾನೆ. ಆಧುನಿಕ ಶೈಲಿಯಲ್ಲಿ ನಿರ್ಮಿತವಾದ ದೊಡ್ಡ ಮನೆಯಲ್ಲಿ ಕಪರ್ಧಿಯ ಮಗನೂ ಇದ್ದನು. ಆ ದಿನ ರಾತ್ರಿಯೇ ಅಲ್ಲಿ ಉಳಿಯಬೇಕಾಗುತ್ತದೆ. ಆ ಸಂದರ್ಭದಲ್ಲಿ ಕಪರ್ಧಿ ತನ್ನ ಸಂಪೂರ್ಣ ಜೀವನ ಕಥೆಯನ್ನು ಲೇಖಕನಿಗೆ ಹೇಳುತ್ತಾನೆ. ಕಪರ್ಧಿ ಬಾಲ್ಯದಲ್ಲೇ ತಂದೆ–ತಾಯಿಯನ್ನು ಕಳೆದುಕೊಂಡು ಮಾವನ ಆಶ್ರಯದಲ್ಲಿ ಬೆಳೆದವನು. ಮಾವನು ಅವನಿಗೆ ಮದುವೆ ಮಾಡಬೇಕೆಂದು ಯೋಚಿಸಿದರೂ, ಕಪರ್ಧಿ ಮೊದಲು ಬಿ.ಎ ಪದವಿ ಮುಗಿಸಿ ನಂತರ ಮದುವೆಯಾಗುತ್ತೇನೆ ಎಂದು ನಿರ್ಧರಿಸುತ್ತಾನೆ. ಅವನು ಬಿ.ಎ ಪೂರ್ಣಗೊಳಿಸುತ್ತಾನೆ. ಒಂದು ದಿನ ಸ್ನೇಹಿತನ ಮದುವೆಗೆ ಹಳ್ಳಿಗೆ ಹೋಗಿದ್ದಾಗ, ರಾತ್ರಿ ನಡೆದ ಭೋಗಮೇಳದಲ್ಲಿ ನೃತ್ಯ ಮಾಡುತ್ತಿದ್ದ 14 ವರ್ಷದ ಹುಡುಗಿ ಮೃಣಾಲಿನಿಯನ್ನು ನೋಡುತ್ತಾನೆ. ಅವಳ ಮೇಲೆ ಮೋಹಗೊಂಡು ಅವಳನ್ನೇ ಮದುವೆಯಾಗಬೇಕೆಂದು ಹಠ ಹಿಡಿಯುತ್ತಾನೆ. ಹಿರಿಯರು ಬುದ್ಧಿವಾದ ಹೇಳಿದರೂ ಅವನು ಕೇಳುವುದಿಲ್ಲ. ಮದುವೆಯಾಗದಿದ್ದರೂ ಕಪರ್ಧಿ ಮತ್ತು ಮೃಣಾಲಿನಿ ಗಂಡ–ಹೆಂಡತಿಯರಂತೆ ಜೀವನ ನಡೆಸುತ್ತಾರೆ. ಆದರೆ ಮೃಣಾಲಿನಿಯ ಕುಟುಂಬ ಮದುವೆಗೆ ಒಪ್ಪುವುದಿಲ್ಲ. ಈ ನಡುವೆ ಕಪರ್ಧಿ ವಕೀಲ ಪದವಿಗಾಗಿ ಎರಡು ವರ್ಷಗಳ ಕಾಲ ದೂರ ಹೋಗುತ್ತಾನೆ. ಅವನು ಮರಳಿ ಬಂದಾಗ ಮೃಣಾಲಿನಿಗೆ ಒಂದು ವರ್ಷದ ಗಂಡು ಮಗು ಇರುತ್ತದೆ. ಸಮಾಜ ಮತ್ತು ಜನರ ಮಾತುಗಳಿಂದ ಪ್ರಭಾವಿತರಾಗಿ, ಕಪರ್ಧಿ ಅವಳನ್ನು ಮದುವೆಯಾಗಲು ನಿರಾಕರಿಸುತ್ತಾನೆ. "ಸಮಾಜ ನನ್ನನ್ನು ಬೇರೆ ರೀತಿಯಲ್ಲಿ ನೋಡುತ್ತದೆ" ಎಂದು ಹೇಳಿ ಅವಳನ್ನು ತಾಯಿಯ ಜೊತೆಗೆ ಇರಲು ಹೇಳುತ್ತಾನೆ.

ಸ್ವಲ್ಪ ಕಾಲದ ನಂತರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಜನರ ಮೇಲೆ ಪೊಲೀಸರು ಗುಂಡು ಹಾರಿಸುತ್ತಾರೆ. ಈ ಸಂದರ್ಭದಲ್ಲಿ ಮೃಣಾಲಿನಿ ಸಾವನ್ನಪ್ಪುತ್ತಾಳೆ. ಅವಳ ಮಗು ಅವಳ ಪಕ್ಕದಲ್ಲೇ ಕುಳಿತು ಅಳುತ್ತಿರುತ್ತದೆ. ಆದರೆ ಸಂಬಂಧಿಕರು ಮಗುವನ್ನು ಕರೆದುಕೊಂಡು ಹೋಗುವುದಿಲ್ಲ. ಆ ಸಮಯದಲ್ಲಿ ಕಪರ್ಧಿ ಮಗುವನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಸಾಕುತ್ತಾನೆ. ಇದರಿಂದ ಅವನು ಮಹಾನ್ ವ್ಯಕ್ತಿಯಾಗಿ ಕಾಣುತ್ತಾನೆ. ಮೊದಲಿಗೆ ಮದುವೆಯನ್ನು ತಿರಸ್ಕರಿಸಿದವನೇ, ಕೊನೆಗೆ ಮಾನವೀಯತೆಯಿಂದ ಮಗುವನ್ನು ಸ್ವೀಕರಿಸುತ್ತಾನೆ.

## ಎರಡೂ ಕಥೆಗಳ ಒಟ್ಟಾರೆ ಅರ್ಥ

ಚಂದ್ರವದನಾ ಮತ್ತು ಕಪರ್ಧಿ ಎರಡೂ ಕಥೆಗಳು ಹಣದ ಆಸೆ, ಸಮಾಜದ ದ್ವಂದ್ವ ನೀತಿ, ವೇಶ್ಯಾವೃತ್ತಿ ಮತ್ತು ಮಹಿಳೆಯ ಶೋಷಣೆಯನ್ನು ಚಿತ್ರಿಸುತ್ತವೆ. ಆದರೆ ಈ ಎಲ್ಲ ಸಂಕಷ್ಟಗಳ ನಡುವೆಯೂ

Cover Page

INTERNATIONAL JOURNAL OF MULTIDISCIPLINARY EDUCATIONAL RESEARCH
ISSN:2277-7881(Print); IMPACT FACTOR :10.16(2026); IC VALUE:5.16; ISI VALUE:2.286
Peer-Peer Reviewed, Refereed & Open Access International Journal - As per UGC Norms
(Fulfilled Suggests Parameters of UGC by IJMER)
Volume:15, Issue:4(3), April 2026
Scopus Review ID: A2B96D3ACF3FEA2A
Article Received: Reviewed: Accepted
Publisher: Sucharitha Publication, India
Online Copy of Article Publication Available: www.ijmer.in

ತಾಯಿತನ ಮತ್ತು ಮಾನವೀಯತೆ ಶ್ರೇಷ್ಠ ಎಂಬ ಸಂದೇಶವನ್ನು ನೀಡುತ್ತವೆ. ಚಂದ್ರವದನಾ ಸಮಾಜದ ತಿರಸ್ಕಾರವನ್ನು ಎದುರಿಸಿದರೂ ತಾಯಿಯಾಗಿ ತನ್ನ ಮಗನೊಂದಿಗೆ ಗೌರವದಿಂದ ಬದುಕಲು ಪ್ರಯತ್ನಿಸುತ್ತಾಳೆ. ಕಪರ್ಧಿ ಆರಂಭದಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಂಡರೂ ಕೊನೆಯಲ್ಲಿ ಮಾನವೀಯತೆಯನ್ನು ಅಳವಡಿಸಿಕೊಳ್ಳುತ್ತಾನೆ.

ಉಪಸಂಹಾರ

ಈ ಎರಡು ಕಥೆಗಳು ಸಮಾಜದ ಅಂಚಿನಲ್ಲಿರುವ ವ್ಯಕ್ತಿಗಳ ಬದುಕನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ. ವೇಶ್ಯೆಯೆಂದು, ಅಕ್ರಮ ಸಂಬಂಧವೆಂದು ತಿರಸ್ಕರಿಸಲ್ಪಟ್ಟ ಜೀವನಗಳಲ್ಲಿಯೂ ಮಾನವೀಯತೆ, ತಾಯಿಯ ಹೃದಯ ಮತ್ತು ನೈತಿಕ ಮೌಲ್ಯಗಳು ಜೀವಂತವಾಗಿವೆ ಎಂಬುದನ್ನು ಲೇಖಕ ಪರಿಣಾಮಕಾರಿಯಾಗಿ ತೋರಿಸುತ್ತಾನೆ.

**ಆಕರ ಗ್ರಂಥಗಳು**

1. ವಿಶ್ವನಾಥ ಸತ್ಯನಾರಾಯಣ: ಚಿನ್ನಕಥಲು: 2015: ಸುಧಾ ಪ್ರಿಂಟಿಂಗ್ ವರ್ಕ್ಸ್, ಏಲೂರು ರೋಡ್. ವಿಜಯವಾಡ ಆಂಧ್ರಪ್ರದೇಶ, 520004.
2. ಡಾ. ಜಿ. ನಾಗಯ್ಯ: ತೆಲುಗು ಸಾಹಿತ್ಯ ಸಮೀಕ್ಷ: 2009: ನವ್ಯ ಪರಿಶೋಧಕ ಪ್ರಕಾಶನ ಭವಾನೀ ನಗರ್, ತಿರುಪತಿ.
3. ಕರೀಗೌಡ ಬೀಚನಹಳ್ಳಿ: ಶತಮಾನದ ಸಣ್ಣಕಥೆಗಳ ಸಮೀಕ್ಷೆ: 2011: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
4. ಸಂಶೋಧಕರು. ಮಲರ್‌ವಿಳಿ .ಕೆ ಮಾಸ್ತಿ ಮತ್ತು ಪುದುಮೈಪಿತ್ತನ್ ಸಣ್ಣ ಕಥೆಗಳು: ಒಂದು ಅಧ್ಯಯನ 2012: ದ್ರಾವಿಡ ವಿಶ್ವ ವಿದ್ಯಾಲಯ ಕುಪ್ಪಂ, ಆಂಧ್ರಪ್ರದೇಶ – 517 426
5. ಜಿ. ಎಸ್. ಶಿವರುದ್ರಪ್ಪ: ಕನ್ನಡ ಸಾಹಿತ್ಯ ಸಮೀಕ್ಷೆ: 2016: ಸಪ್ನ ಬುಕ್ ಹೌಸ್ ಬೆಂಗಳೂರು.
6. ಪ್ರೊ. ಎಲ್. ಎಸ್. ಶೇಷಗಿರಿರಾವ್: ಹೊಸಗನ್ನಡ ಸಾಹಿತ್ಯ ಚರಿತ್ರೆ: ಸಪ್ನ ಬುಕ್ ಹೌಸ್ ಬೆಂಗಳೂರು.
7. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ – ಮಾಸ್ತಿ ಸಣ್ಣ ಕಥೆಗಳ ಸಂಪುಟ.